ಸದ್ದಿಲ್ಲದ ನಡಿಗೆ, ಯಾವುದೇ ತಪ್ಪಿಲ್ಲದ ಅಹವಾಲಿನ ನೋಟ ಮತ್ತು ತಾನೇನೂ ಮಾಡಲಾಗದ ಮಾನಸಿಕ ಸ್ಥಿತಿ ಅವನನ್ನು ಖಿನ್ನತೆಗೆ ದೂಡುತ್ತಿದ್ದವು. ಆ ಕ್ಷಣದಲ್ಲಿ ಆತನು ಅಸಫಲನಾದ ಶತಮೂರ್ಖನಂತೆ, ತನ್ನ ಕುಟುಂಬದ ಅಗತ್ಯವನ್ನು ಪೂರೈಸಲಾಗದ ಹೇಡಿಯಂತೆ ಅಪಾರ ಯಾತನೆಯನ್ನು ಅನುಭವಿಸುತ್ತಿದ್ದ.

ಅಂತಹದೇ ಅದೊಂದು ದಿನ! ಈ ಮನಃಸ್ಥಿತಿಯಲ್ಲಿ ನಾನು ಇಂದಿನ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ನಿರ್ವಹಿಸುವುದು ಹೇಗೆ ಎಂದು ಅವನು ಅಧೀರನಾದ. ರೂಹಿಯೊಡನೆ ತಕ್ಷಣದಲ್ಲಿ ಮಾತನಾಡಬೇಕೆಂಬ ತೀವ್ರ ಭಾವವೊಂದು ಉತ್ಪನ್ನವಾಯಿತು. ಅವನು ತನ್ನ ಜೇಬಿನಿಂದ ಮೊಬೈಲನ್ನು ಹೊರ ತೆಗೆಯುವಷ್ಟರಲ್ಲಿ ಅವನ ಕಣ್ಣು ಆ ಅಂಗಡಿಯ ಮೇಲೆ ಬಿತ್ತು. 'ಅರೆ! ನಾನು ಮೂರು ವರ್ಷಗಳಿಂದ ಇದೇ ಬೀದಿಯಲ್ಲಿ ಓಡಾಡುತ್ತಿದ್ದೇನೆ. ನನ್ನ ಕಣ್ಣಿಗೆ ಇದುವರೆಗೂ ಈ ಅಂಗಡಿ ಕಾಣಲಿಲ್ಲವಲ್ಲ' ಎಂದು ಅವನು ಅಂದುಕೊಂಡು ಕೂಡಲೇ ಕಾರನ್ನು ನಿಲ್ಲಿಸುವಂತೆ ಕೃಷ್ಣಪ್ಪನಿಗೆ ಹೇಳಿದ. ನಂತರ ಸಾವಕಾಶವಾಗಿ ಅವನು ಕಾರಿನಿಂದ ಇಳಿದು ಅಂಗಡಿಯ ಒಳಹೊಕ್ಕ. ಅವನು ಸಾಮಾನ್ಯವಾಗಿ ಹಾಗೆ ಅಂಗಡಿಗಳಿಗೆ ಹೋಗುತ್ತಿರಲಿಲ್ಲ. ಅದೆಲ್ಲವೂ ರಾಬಿಯಾಳ ಕಾರ್ಯಕ್ಷೇತ್ರವಾಗಿತ್ತು. ಇಂದು ಮಾತ್ರ ಅವನು ಅಯಾಚಿತವಾಗಿ ಅನೈಚ್ಛಿಕವಾಗಿ ಯಾವುದೇ ಪೂರ್ವ ತಯಾರಿ ಇಲ್ಲದೆ ಅಂಗಡಿಯ ಒಳಹೋಗಿದ್ದ. ಹಾಗೂ ಕೋರ್ಟಿನ ಸಮಯ ಮೀರುತ್ತಿದೆ ಎಂಬ ಪ್ರಜ್ಞೆಯೊಂದಿಗೆ ಅವನು ಆತುರಾತುರವಾಗಿ ಕಣ್ಣು ಹಾಯಿಸಿದ. ಮತ್ತು ಅಂಗೈ ಅಗಲದ ಮೂರ್ನಾಲ್ಕು ಚಾಕೋಲೇಟ್‌ಗಳನ್ನು ಮತ್ತು ಕೆಂಪು ಸೀರೆಯನ್ನುಟ್ಟು ವಧುವಿನ ಅಲಂಕಾರದಲ್ಲಿದ್ದ ಒಂದು ಗೊಂಬೆಯನ್ನು ಖರೀದಿಸಿ ತನ್ನ ಕಾರಿಗೆ ಮರಳಿದ. ಅವನ ಬೆನ್ನ ಹಿಂದೆಯೇ ಇದ್ದ ಕೃಷ್ಣಪ್ಪನಿಗೆ ಆಶ್ಚರ್ಯವಾಯಿತು. ಸಾಹೇಬರ ಮನೆಗೆ ಯಾವ ಮಕ್ಕಳೂ ಬಂದಿಲ್ಲ. ಇವರು ಯಾರಿಗಾಗಿ ಖರೀದಿಸುತ್ತಿದ್ದಾರೆ ಎಂದು ಅವನು ಆಲೋಚಿಸಿ ಸುಮ್ಮನಾದ. ಅವನು ಜಾಸ್ತಿ ತಲೆಕೆಡಿಸಿಕೊಳ್ಳುವ ಸ್ವಭಾವದವನಲ್ಲ. ಆದರೆ ಸಾಹೇಬರ ಕೈಯಿಂದ ಪ್ಯಾಕೆಟ್‌ಗಳನ್ನು ಇಸಿದುಕೊಂಡು ಬಂದು ಕಾರಿನಲ್ಲಿಟ್ಟ.

ಶಾಹಿದ್ ಅಹ್ಮದ್ ಸರಸರನೆ ನಡೆದು ಬಂದು ತನ್ನ ಚೇಂಬರ್ ಹೊಕ್ಕ. ತನ್ನಿಂದ ಅಗತ್ಯದ ಸಹಿಗಳನ್ನು ಮತ್ತು ಆದೇಶಗಳನ್ನು ಪಡೆಯಲು ಅವನ ಆಫೀಸಿನ ಸಿಬ್ಬಂದಿ ಕಾಯುತ್ತಿದ್ದುದನ್ನು ಅವನು ಕಣ್ಣ ಕೊನೆಯಿಂದಲೇ ನೋಡಿದ. ಆ ದಿನ ಅವನಿಗೆ ಬಿಡುವಿಲ್ಲದ ಕೆಲಸವಿತ್ತು. ಕೊಲೆ ಪ್ರಕರಣವೊಂದರ ವಿಚಾರಣೆಯ ಸಲುವಾಗಿ ಸಾಕ್ಷಿಗಳ ದಂಡೇ ನೆರೆದಿತ್ತು. ಯಥಾಪ್ರಕಾರ ವಧು ದಹನದ ಪ್ರಕರಣವಾಗಿದ್ದು ಆರೋಪಿಯಾಗಿದ್ದ ಪತಿಯು ತನ್ನ ವಿವಾಹಬಾಹಿರ ಸಂಬಂಧದ ಗೋಜಲಿನಲ್ಲಿ ತನ್ನ ಸಿರಿವಂತ ಪ್ರೇಯಸಿಯನ್ನೇ ಆಯ್ಕೆ ಮಾಡಿದ್ದು ಪತ್ನಿಯನ್ನು ಕೊಲೆ ಮಾಡಿದ್ದ. ಅಪರೂಪಕ್ಕೆಂಬಂತೆ ಪೊಲೀಸಿನವರು ತನಿಖೆಯನ್ನು ಸರಿಯಾದ ನಿಟ್ಟಿನಲ್ಲಿ ನಡೆಸಿದ್ದು ಸಕ್ಷಮ ಆಧಾರಗಳನ್ನು ಸಲ್ಲಿಸಿದ್ದರು. ನಿರಾಕರಿಸಲಾಗದ ದೃಢವಾದ ಸಾಕ್ಷ್ಯಾಧಾರಗಳ ಎದುರು ಆರೋಪಿ ಪರ ವಕೀಲರು ತಡಬಡಾಯಿಸಿದರು. ಅವನು ನ್ಯಾಯಾಧೀಶನಾಗಿ ಆಯ್ಕೆಯಾಗುವುದಕ್ಕೆ ಮುನ್ನ ವಕೀಲನಾಗಿ ಪ್ರ್ಯಾಕ್ಟೀಸ್ ಮಾಡುತ್ತಿದ್ದ. ಆಗ ವಕೀಲರ ನಡುವೆ ಪ್ರಚಲಿತವಾಗಿದ್ದ ಒಂದು ಒಳ ಗುಟ್ಟೆಂದರೆ ಕ್ರಿಮಿನಲ್ ಕೇಸ್‌ಗಳು ನಡೆಯುವುದು ನ್ಯಾಯಾಲಯದ ಹೊರಗೆ ಎಂಬುದಾಗಿತ್ತು. ಕ್ರಿಮಿನಲ್ ಪ್ರಕರಣವೊಂದನ್ನು ಗೆಲ್ಲುವುದಾದರೆ ಅನುಸರಿಸಬೇಕಾದ ವಿಧಾನವೊಂದು ವಕೀಲರ ನಡುವೆ ಆಂತರಿಕವಾಗಿ ಪ್ರವಹಿಸುತ್ತಿತ್ತು. ಸಾಕ್ಷಿಗಳ ಮೇಲೆ ಅನುಚಿತ ಪ್ರಭಾವವನ್ನು ಬೀರಿ ಅವರನ್ನು ಪ್ರತಿಕೂಲ ಸಾಕ್ಷಿಗಳನ್ನಾಗಿ ಮಾಡಿ ಆ ಮೂಲಕ ಸಾಕ್ಷ್ಯಾಧಾರಗಳ ಕೊರತೆಯಿಂದ ದುಷ್ಕೃತ್ಯವು ಸಾಬೀತಾಗಲಿಲ್ಲವೆಂದು ಆರೋಪಿಯನ್ನು ಬಿಡುಗಡೆ ಮಾಡುವ ಹುನ್ನಾರ ಆಗಿತ್ತು ಅದು.